**ಕರ್ನಾಟಕ ಸರ್ಕಾರ**

(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ತಾಂ.ಶಿ.ಇ 48 ಸಿಡಿಸಿ(1) 2016

ನಿರ್ದೇಶಕರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-1,
ದಿನಾಂಕ:23/02/2017.

## ಸುತ್ತೋಲೆ

ವಿಷಯ: ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ವಿಭಾಗಾವಾರು ಉಪನ್ಯಾಸಕರು ಮತ್ತು ಸರ್ಕಾರಿ / ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಭಾಗಾವಾರು ಪ್ರೊಫೆಸರ್/ಅಸೋಸಿಯೇಟ್ ಪ್ರೊಫೆಸರ್ / ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳ ವಿವರ ಒದಗಿಸುವ ಬಗ್ಗೆ.

ಉಲ್ಲೇಖ: ಮಾನ್ಯ ನಿರ್ದೇಶಕರ ಜ್ಞಾಪನ ಸಮ ಸಂಖ್ಯೆ ದಿನಾಂಕ:07/02/2017.

ಮೇಲ್ಕಂಡ ವಿಷಯದ ಬಗ್ಗೆ ಉಲ್ಲೇಖದಲ್ಲಿನ ಜ್ಞಾಪನದಲ್ಲಿ ಸೂಚಿಸಿರುವಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ವಿಭಾಗಾವಾರು ಉಪನ್ಯಾಸಕರು ಮತ್ತು ಸರ್ಕಾರಿ / ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿಭಾಗಾವಾರು ಪ್ರೊಫೆಸರ್ / ಅಸೋಸಿಯೇಟ್ ಪ್ರೊಫೆಸರ್ / ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳ ಸಂಖ್ಯೆಗಳನ್ನು ಎಐಸಿಟಿಇ / ಕರ್ನಾಟಕ ಸರ್ಕಾರ ಪ್ರಕಟಿಸಿರುವ ನಿಯಮಾವಳಿಗಳು ಹಾಗು ಚಾಲ್ತಿಯಲ್ಲಿರುವ ಪಠ್ಯಕ್ರಮದನ್ವಯ ಮತ್ತು ಪ್ರತಿ ಪ್ರೋಗ್ರಾಂವಾರು ವಿದ್ಯಾರ್ಥಿಗಳ ಒಟ್ಟು ಸಂಖ್ಯೆಗಳಿಗೆ (ಪ್ರೋಗ್ರಾಂನ ಸಂಪೂರ್ಣ ಅವಧಿಯನ್ನು ಪರಿಗಣಿಸಿ) ಅನುಗುಣವಾಗಿ ಪ್ರತಿಯೊಬ್ಬ ಉಪನ್ಯಾಸಕರು ತೆಗೆದುಕೊಳ್ಳಬೇಕಾಗಿರುವ ಕಾರ್ಯಭಾರಗಳ ಬಗ್ಗೆ ಇರುವ ನಿಯಮಾವಳಿಗಳಂತೆ ಹುದ್ದೆಗಳ ಸಂಖ್ಯೆಗಳನ್ನು ನಿಗಧಿ ಪಡಿಸುವ ಸಲುವಾಗಿ "ಏಕ ರೂಪ ನಿಯಮಾವಳಿಗಳನ್ನು" ರೂಪಿಸಲು ಸಮಿತಿಯನ್ನು ಈಗಾಗಲೇ ರಚಿಸಲಾಗಿದೆ.

ಸಮಿತಿಯು ಈ ಬಗ್ಗೆ ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಲು ಸಂಸ್ಥೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ಬಗ್ಗೆ ಸ್ಪಷ್ಟ ಮಾಹಿತಿಗಳು ಬೇಕಾಗಿದ್ದು, ಸದರಿ ಮಾಹಿತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ (ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳು ಪ್ರತ್ಯೇಕವಾಗಿ) ಮಾಹಿತಿಯನ್ನು ಪತ್ರ ಮುಖೇನ ಜಂಟಿ ನಿರ್ದೇಶಕರು(ಸಿಡಿಸಿ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಹಾಗು ನಿರ್ದೇಶನಾಲಯದ ಅಂತರಜಾಲದಲ್ಲಿ ಈ ಬಗ್ಗೆ ಪ್ರಕಟಿಸಿರುವ **"Google Format"** ನಲ್ಲಿ ದಿನಾಂಕ:02-03-2017ರ ಒಳಗಾಗಿ ತಪ್ಪದೇ ನಿಖರವಾಗಿ ಸಂಸ್ಥೆಗಳ ಪ್ರಚಾರ್ಯರು ಖುದ್ದು ಆಸಕ್ತಿ ವಹಿಸಿ ದಾಖಲಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.

ಜಂಟಿ ನಿರ್ದೇಶಕರು(ಸಿಡಿಸಿ) 23/02/17

**ಗೆ:** ಸರ್ಕಾರಿ / ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಹಾಗು ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು
– ಸೂಕ್ತ ಕ್ರಮಕ್ಕಾಗಿ.

ಪ್ರತಿ: ಇ-ಗೌವರ್ನೆನ್ಸ್ ವಿಭಾಗ, ತಾಂ.ಶಿ.ನಿ – ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.